**2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ.**

**ದಿಃ 03.02.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ಪ್ರತಿವಾದಿ ಪರ ವಕೀಲರಿಂದಃ**

ದಿಃ 26/03/2008 ರಂದು ನನ್ನ ಹೆಸರಿಗೆ ಮೃತ ಮುದುಕಪ್ಪ ಇವರು ಮಾಡಿಕೊಟ್ಟ ಖರೀದಿ ಪತ್ರವನ್ನು ಹಾಜರುಪಡಿಸಿದ್ದು ಸದರಿ ದಾಖಲೆಯನ್ನು ನಿಡಿ.1 ಎಂದು ಗುರುತಿಸಲಾಯಿತು. ಸದರಿ ದಾಖಲೆಯಲ್ಲಿರುವ ಸಾಕ್ಷಿಯ ಸಹಿಯನ್ನು ನಿಡಿ.1(ಎ) ಹಾಗೂ ಖರೀದಿ ಪತ್ರ ಮಾಡಿಕೊಟ್ಟವರ ಸಹಿಯನ್ನು ನಿಡಿ.1(ಬಿ) ಎಂದು ಗುರುತಿಸಲಾಯಿತು. ಸದರಿ ದಾಖಲೆಗೆ ಮುದುಕಪ್ಪ ಬಡಕ್ಕನವರ ಇವರ ಹೆಂಡತಿ ಮತ್ತು ಮಗಳು ಸಹ ಸಹಿ ಮಾಡಿರುತ್ತಾರೆ. ಅವರ ಸಹಿಗಳನ್ನು ನಾನು ಗುರುತಿಸಬಹುದು. ಅವರ ಹೆಂಡತಿಯ ಹೆಬ್ಬಟ್ಟಿನ ಗುರುತು ಇರುತ್ತದೆ. ಸಾಕ್ಷಿ ಅದನ್ನು ಗುರುತಿಸುತ್ತಾರೆ, ಅವರ ಮಗಳ ಸಹಿಯನ್ನು ನಿಡಿ.1(ಸಿ) ಎಂದು ಗುರುತಿಸಲಾಯಿತು.

**(ಪಾಟೀ ಸವಾಲುಃ ವಾದಿ ಪರ ವಕೀಲರು ಪಾಟಿ ಸವಾಲಿಗೆ ಸಮಯಾವಕಾಶ ಕೋರಿದ್ದು ನೀಡಿ ಮುಂದೂಡಲಾಯಿತು).**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

Sd/-

**2 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.**